# ಶಕ್ತಿಯ ಪ್ರಾಸ್ತಾವಿಕ ವಿವೇಚನೆ

## ಸಾರ್ವತ್ರಿಕ ಮನೋಗತ

ದೇವತೆಯ ವಿಷಯದಲ್ಲಿನ ಅಧ್ಯಾತ್ಮಶಾಸ್ತ್ರೀಯ ಮಾಹಿತಿಯು ತಿಳಿದರೆ ಅವಳ ಬಗ್ಗೆ ಶ್ರದ್ಧೆ ಹೆಚ್ಚಾಗಲು ಸಹಾಯವಾಗುತ್ತದೆ. ಶ್ರದ್ಧೆಯಿಂದಾಗಿ ಉಪಾಸನೆಯು ಭಾವಪೂರ್ಣವಾಗಿ ಆಗಲು ಸಹಾಯವಾಗುತ್ತದೆ ಮತ್ತು ಇಂತಹ ಉಪಾಸನೆಯು ಹೆಚ್ಚು ಫಲದಾಯಕವಾಗಿರುತ್ತದೆ.

ಶಕ್ತಿಯ ಪೂಜಕರಿಗೆ ಹಾಗೂ ಶಕ್ತಿಯ ಸಾಂಪ್ರದಾಯಿಕ ಸಾಧನೆ ಮಾಡುವವರಿಗೆ ಮುಂದೆ ನೀಡಿದ ಮಾಹಿತಿಯು ನಿಶ್ಚಿತವಾಗಿಯೂ ಉಪಯುಕ್ತವಾಗಿದೆ; ಆದರೆ ಸಾಮಾನ್ಯ ವ್ಯಕ್ತಿಯು ಮಾತ್ರ ಈ ಸಂದರ್ಭದಲ್ಲಿ ಮುಂದಿನ ನಿಯಮವನ್ನು ಗಮನದಲ್ಲಿಟ್ಟುಕೊಳ್ಳಬೇಕು. ರಾಮಾಯಣ ಓದಿದಾಗ ಶ್ರೀರಾಮನ, ಗಣಪತಿ ಅಥರ್ವಶೀರ್ಷ ಓದಿದಾಗ ಶ್ರೀ ಗಣಪತಿಯ ಉಪಾಸನೆ ಮಾಡಬೇಕೆಂದು ಕೆಲವರಿಗೆ ಅನಿಸುತ್ತದೆ. ಹಾಗೆಯೇ ಈ ಗ್ರಂಥದಲ್ಲಿನ ಮಾಹಿತಿ ಓದಿ 'ನಾವೂ ಶ್ರೀ ಲಕ್ಷ್ಮೀ, ಶ್ರೀ ದುರ್ಗಾ ಇವರಂತಹ ದೇವಿಯರ ಉಪಾಸನೆ ಮಾಡಬೇಕು' ಎಂದು ಕೆಲವರಿಗೆ ಅನಿಸಬಹುದು; ಆದರೆ ಇಂತಹ ಉಪಾಸನೆಯಿಂದ ಎಲ್ಲರ ಶೀಘ್ರ ಆಧ್ಯಾತ್ಮಿಕ ಉನ್ನತಿಯಾಗಲಾರದು; ಏಕೆಂದರೆ ಶ್ರೀ ಲಕ್ಷ್ಮೀ, ಶ್ರೀ ದುರ್ಗಾದೇವಿ ಮುಂತಾದ ದೇವತೆಗಳ ಉಪಾಸನೆ ಮಾಡುವುದು ಅವರಿಗೆ ಆವಶ್ಯಕವಿದ್ದರೆ ಮಾತ್ರ ಅವರಿಗೆ ಆ ಉಪಾಸನೆಯಿಂದ ಹೆಚ್ಚು ಲಾಭವಾಗುತ್ತದೆ; ಇಲ್ಲದಿದ್ದಲ್ಲಿ ಬಹಳಷ್ಟು ಸಾಧನೆ ಮಾಡಿಯೂ ಅತ್ಯಲ್ಪ ಪ್ರಗತಿಯಾಗುತ್ತದೆ. ಇಂತಹ ದೇವಿಯರ ಉಪಾಸನೆ ಮಾಡುವುದು ಆವಶ್ಯಕವಾಗಿದೆಯೋ ಅಥವಾ ಇಲ್ಲವೋ ಎಂಬುದು ಸಾಮಾನ್ಯ ವ್ಯಕ್ತಿಗೆ ತಿಳಿಯುವುದಿಲ್ಲ. ಆದುದರಿಂದ ಇಂತಹವರು ಈ ಗ್ರಂಥಮಾಲಿಕೆಯನ್ನು ಮಾಹಿತಿಗೆಂದೇ ಓದಬೇಕು. ಶಕ್ತಿಯ ಅನುಭೂತಿ ಬರುವುದರ ದೃಷ್ಟಿಯಿಂದ ಸಾಧನೆಯ ಮೊದಲ ಹಂತದಲ್ಲಿ ತಮ್ಮ ಕುಲ ದೇವತೆಯ ನಾಮಜಪವನ್ನು ಮಾಡಬೇಕು. ಕುಲದೇವತೆಯ ಉಪಾಸನೆಯ ಬಗ್ಗೆ ಗ್ರಂಥದಲ್ಲಿ ಮಾಹಿತಿ ನೀಡಲಾಗಿದೆ. (ಶ್ರೀ ಲಕ್ಷ್ಮೀ, ಶ್ರೀ ದುರ್ಗಾದೇವಿ ಇವರು ಕುಲದೇವತೆಗಳಾಗಿದ್ದಲ್ಲಿ ಅವರ ಉಪಾಸನೆಯನ್ನು ಅಗತ್ಯವಾಗಿ ಮಾಡಬೇಕು.) ಮುಂದೆ ಗುರುಗಳು ಅನ್ಯ ದೇವಿಯ ನಾಮಜಪ ಮಾಡಲು ಹೇಳಿದರೆ ಅಥವಾ ಸಾಧನೆಯ ಮುಂದಿನ ಹಂತದಲ್ಲಿ ಆಧ್ಯಾತ್ಮಿಕ ಉನ್ನತಿ ಹೊಂದಲು ಆ ದೇವಿಯ ನಾಮಜಪ ಮಾಡುವ ಆವಶ್ಯಕತೆಯಿದ್ದಲ್ಲಿ ಈ ಗ್ರಂಥಮಾಲಿಕೆಯ ಮಾಹಿತಿಯು ಆ ದೇವಿಯ ಬಗ್ಗೆ ಶ್ರದ್ಧೆ ವೃದ್ಧಿಸಿಕೊಳ್ಳಲು ಉಪಯೋಗವಾಗುವುದು. ಇತರರಿಗೆ ಈ ಗ್ರಂಥಮಾಲಿಕೆಯ ಮಾಹಿತಿ ಓದಿ ವಿವಿಧ ದೇವಿಯರ ಬಗ್ಗೆ ಏನಾದರೂ ಹೊಸ ವಿಷಯ ತಿಳಿಯಿತು ಎಂದೆನಿಸಬಹುದು.

ಈ ಗ್ರಂಥಮಾಲಿಕೆಯ ಓದಿ ಶಕ್ತಿಪೂಜಕರಲ್ಲಿ ದೇವಿಯ ಮೇಲಿನ ಶ್ರದ್ಧೆಯು ಹೆಚ್ಚು ದೃಢವಾಗಲಿ ಮತ್ತು ಪ್ರತಿಯೊಬ್ಬರಿಗೂ ಸಾಧನೆಯನ್ನು ಮಾಡಲು ಪ್ರೇರಣೆಯು ದೊರಕಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – ಸಂಕಲನಕಾರರು

**ಅನುಕ್ರಮಣಿಕೆ**

(ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು '*' ದಲ್ಲಿ ತೋರಿಸಲಾಗಿದೆ)


| | |
|---|---|
| **೧. ವ್ಯುತ್ಪತ್ತಿ ಮತ್ತು ಅರ್ಥ** | **೧೬** |
| **೨. ಶಕ್ತಿಗಳ ಹೆಸರು, ಸಾಮರ್ಥ್ಯ ಮತ್ತು ಗುಣ ಇವುಗಳ ಗೊಂದಲ** | **೧೭** |
| **೩. ಆದ್ಯಾಶಕ್ತಿ** | **೧೮** |
| * ಮೂರು ಮುಖ್ಯ ರೂಪಗಳು : ಮಹಾಕಾಳಿ, ಮಹಾಲಕ್ಷ್ಮೀ, ಮತ್ತು ಮಹಾಸರಸ್ವತಿ | ೧೯ |
| **೪. ಶಕ್ತಿಗಳ ನಿರ್ಮಿತಿ** | **೧೯** |
| **೫. ಶಕ್ತಿಯ ವಿಧಗಳು** | **೨೦** |
| * ಭಗವಂತನ ಶಕ್ತಿ : ಅಂತರಂಗ, ತಟಸ್ಥ ಮತ್ತು ಬಹಿರಂಗ | ೨೦ |
| * 'ವಿದ್ಯಾ' ಮತ್ತು 'ಮೋಹಿನಿ' | ೨೧ |
| * ಕಾರ್ಯಕ್ಕನುಸಾರ ವಿಧಗಳು : ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಸಂಬಂಧಿಸಿದ ಶಕ್ತಿ | ೨೧ |
| * ಬ್ರಹ್ಮದೇವನಿಗೆ ಸಂಬಂಧಿಸಿದ ಶಕ್ತಿಗಳು : ಬ್ರಹ್ಮಾಣಿ ಮತ್ತು ಸರಸ್ವತಿ | ೨೩ |
| * ಶ್ರೀವಿಷ್ಣುವಿಗೆ ಸಂಬಂಧಿಸಿದ ಶಕ್ತಿ : ಶ್ರೀ ಲಕ್ಷ್ಮೀ | ೨೪ |
| * ಶಿವನಿಗೆ ಸಂಬಂಧಿಸಿದ ಶಕ್ತಿ : ಪಾರ್ವತಿ | ೨೯ |
| * ಶ್ರೀ ಗಣಪತಿಗೆ ಸಂಬಂಧಿಸಿದ ಶಕ್ತಿ : ಶಾರದಾ | ೫೧ |
| * ಯೋಗಮಾರ್ಗಕ್ಕನುಸಾರವಾಗಿ ವಿಧಗಳು | ೬೨ |
| * ಮಾನಸಿಕ ಮತ್ತು ಆಧ್ಯಾತ್ಮಿಕ ಗುಣಗಳ ಮೇಲಾಧಾರಿತ ಮನಃಶಕ್ತಿ | ೬೩ |
| * ಉನ್ನತ ವ್ಯಕ್ತಿಗಳಲ್ಲಿನ ಶಕ್ತಿ ಮತ್ತು ಅದು ವ್ಯಯವಾಗುವ ಕೆಲವು ಕಾರಣಗಳು | ೬೪ |
| * ಒಳ್ಳೆಯ ಮತ್ತು ತ್ರಾಸದಾಯಕ ಶಕ್ತಿ | ೬೭ |
| **೬. ಸಪ್ತಲೋಕಗಳು ಮತ್ತು ಶಕ್ತಿಯ ಪ್ರಮಾಣ** | **೬೮** |
| **೭. ಕಾರ್ಯ** | **೬೮** |
| **೮. ಮಿತಿ** | **೭೦** |